ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಅಭಿಪ್ರಾಯವೇನೆಂದರೆ, ನಾಳೆಯ ದಿವಸ ಕೊನೆಯ ದಿವಸವಾಗುವುದರಿಂದ, ಅಲ್ಲಿಯವರಿಗೆ ಕಾದು ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ಹೇಗೆ ?

MR. DEPUTY SPEAKER.—Keeping in view that the Assembly Sessions will be closed on 31st I will take a decision.

ಶ್ರೀ ಎಸ್. ಬಂಗಾರಪ್ಪ.—ಹಾಗೆಯೇ ಬೇರೆ ವಿಚಾರಗಳು ಇಲ್ಲಿ ಹೇಳಬೇಕಾದವು ಇವೆ. ಅವು ತಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಬರುತ್ತಾ ಇಲ್ಲ.

ಉಪಾಧ್ಯಕ್ಷರು.—ಅದನ್ನು ಪರಿಶೀಲನೆ ಮಾಡುತ್ತೇನೆ.

## CALLING ATTENTION TO MATTER OF URGENT PUBLIC IMPORTANCE

*Re : Relay of T. V. Programmes in Bangalore)*

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅಧ್ಯಕ್ಷರೆ, ಮಾನ್ಯ ವಾರ್ತಾ, ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳ ಗಮನವನ್ನು, ಬೆಂಗಳೂರಿನಿಂದ ಪ್ರಚಾರವಾಗುತ್ತಿರುವ ಟಿ.ವಿ. ಕಾರ್ಯಕ್ರಮಗಳ ಬಗ್ಗೆ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಾರ್ತಾ, ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು).—ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಈಗ ಬೆಂಗಳೂರಿನಲ್ಲಿ ದಿನಾಂಕ ೧-೧೧-೧೯೮೫ರಲ್ಲಿ ಪ್ರಾರಂಭವಾದ ದೂರದರ್ಶನ ಮರು ಪ್ರದರ್ಶನ ಕೇಂದ್ರ ಮಾತ್ರ ಇದೆ. ವಾರದಲ್ಲಿ ನಾಲ್ಕು ದಿನ ಅಂದರೆ ಸೋಮವಾರ, ಮಂಗಳವಾರ, ಬುಧವಾರ ಮತ್ತು ಗುರುವಾರಗಳಂದು ಮದರಾಸು ದೂರದರ್ಶನ ಕೇಂದ್ರದಿಂದಲೂ ಹಾಗೂ ಇನ್ನುಳಿದ ಮೂರು ದಿನ ಅಂದರೆ ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ಮುಂಬಯಿ ದೂರದರ್ಶನ ಕೇಂದ್ರದಿಂದ ಪ್ರಸಾರವಾಗುವ ರಾಷ್ಟ್ರೀಯ ಕಾರ್ಯಕ್ರಮವನ್ನು ಸೇರಿದಂತೆ ಕೇವಲ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಗುತ್ತಿದೆ.

ಈ ಕೇಂದ್ರದಿಂದ ಪ್ರದರ್ಶಿಲ್ಪಡುವ ಕನ್ನಡ ಕಾರ್ಯಕ್ರಮಗಳನ್ನು ಬಹಳ ಜನರು ನೋಡಿ. ದಿನಾಂಕ ೧-೧೧-೧೯೮೫ ರಿಂದ ೩೧-೧೨-೧೯೮೫ ರೊಳಗೆ ಪ್ರದರ್ಶಿಸಲ್ಪಟ್ಟ ಕನ್ನಡ ಕಾರ್ಯಕ್ರಮದ ಒಟ್ಟು ಅವಧಿ ಕೇವಲ ಆರು ಘಂಟೆ ಮೂವತ್ತು ನಿಮಿಷಗಳು. ಈ ವರ್ಷದ ಪ್ರಾರಂಭದಿಂದ ಇಲ್ಲಿಯವರೆವಿಗೆ ೧೨ ಘಂಟೆಗಳಿಗಿಂತ ಕಮ್ಮಿ ಅವಧಿಯಂತೆ ಕನ್ನಡ ಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟಿವೆ. ಈ ಕಾರಣದಿಂದಾಗಿ ಆದಷ್ಟು ಬೇಗ ಹೊರಾಂಗಣ ಪ್ರಸಾರ ವಾಹನವನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ. ಈ ವಾಹನ ಬಂದಾಗ ಸ್ಥಳೀಯ ಪ್ರತಿಭಾವಂತರಿಂದ ಹೆಚ್ಚು ಹೆಚ್ಚು ಕನ್ನಡ ಕಾರ್ಯಕ್ರಮ ಒದಗಿಸಲು ಸಾಧ್ಯವಾಗುತ್ತದೆ. ಈ ವಿಷಯದಲ್ಲಿ ನಾನು ಕೇಂದ್ರ ಸರಕಾರದೊಂದಿಗೆ ವ್ಯವಹರಿಸುತ್ತಿದ್ದೇನೆ. ದಿನಾಂಕ ೨೧-೨-೧೯೮೬ ರಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರಿಗೆ ಪತ್ರವೊಂದನ್ನು ಬರೆದಿದ್ದೇನೆ. ದಿನಾಂಕ ೨೨-೨-೧೯೮೬ ರಂದು ಕರ್ನಾಟಕದ ಎಲ್ಲ ಸಂಸತ್ ಸದಸ್ಯರಿಗೂ ಪತ್ರ ಬರೆದು ಆದಷ್ಟು ಬೇಗ ಕರ್ನಾಟಕಕ್ಕೆ ಹೊರಾಂಗಣ ದೂರದರ್ಶನ ವಾಹನ ಒದಗಿಸಲು ಕೇಂದ್ರ ಸರಕಾರವನ್ನು ಒತ್ತಾಯಿಸುವಂತೆ ತಿಳಿಸಿದ್ದೇನೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರೊಡನೆ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹೇಳಿದ್ದೇವೆಂದು ಕರ್ನಾಟಕದ ಕೆಲವು ಸಂಸತ್ ಸದಸ್ಯರು ಉತ್ತರಿಸಿದ್ದಾರೆ. ನಾನು ಕಳೆದ ಸಾರಿ ದೆಹಲಿಗೆ ಭೇಟಿ ನೀಡಿದ್ದಾಗ ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿ ಶ್ರೀ ಹೆಚ್.ಕೆ. ಎಲ್. ಭಗತ್, ಕರ್ನಾಟಕದ ಕೇಂದ್ರ ಸಚಿವರುಗಳಾದ ಶ್ರೀ ವೀರೇಂದ್ರ ಪಾಟೀಲ್, ಶ್ರೀ ಶಂಕರಾನಂದ ಶ್ರೀ ಎಸ್ ಎಂ. ಕೃಷ್ಣ, ಶ್ರೀ ಜಾಫರ್ ಶರೀಫ್, ಶ್ರೀ ಜನಾರ್ಧನ ಪೂಜಾರಿ ಹಾಗೂ ಕರ್ನಾಟಕದ ಸಂಸತ್ ಸದಸ್ಯರೊಂದಿಗೆ ಕರ್ನಾಟಕಕ್ಕೆ ಹೊರಾಂಗಣ ಪ್ರಸಾರ ವಾಹನ ಒದಗಿಸುವ ಬಗ್ಗೆ ಮಾತನಾಡಿದ್ದೇನೆ. ಕರ್ನಾಟಕಕ್ಕೆ ಹೊರಾಂಗಣ ಪ್ರಸಾರ ವಾಹನ ದೊರೆಯುವವರೆಗೆ ನನ್ನ ಪ್ರಯತ್ನ ಮುಂದುವರಿಸುತ್ತೇನೆ.

ಬೆಂಗಳೂರಿನಲ್ಲಿ ಒಂದು ಖಾಯಂ ದೂರದರ್ಶನ ಕೇಂದ್ರವನ್ನು ಸ್ಥಾಪಿಸುವಬಗ್ಗೆ ಮಾನ್ಯ ಸದಸ್ಯರು ಹೇಳಿರುವ ಅನಾನುಕೂಲಗಳು ಮುಂದುವರಿಯುವುದು. ಆದ್ದರಿಂದ ಬೆಂಗಳೂರಿನಲ್ಲಿ ಖಾಯಂ ದೂರದರ್ಶನ ಸ್ಥಾಪಿಸಲು ಅವಶ್ಯ ಕ್ರಮ ಕೈಗೊಳ್ಳಲಾಗಿದೆ. ಈ ಕೇಂದ್ರ ಸ್ಥಾಪನೆಗೆ ಬೇಕಾದ ೭ ಎಕರೆ ಜಮೀನನ್ನು ದೂರದರ್ಶನದ ಅಧಿಕಾರಿಗಳಿಗೆ ೧೯೮೧ ಅಕ್ಟೋಬರ್ ೩೦ ರಂದು ನಗರದ ಮುನಿರೆಡ್ಡಿ ಪಾಳ್ಯದಲ್ಲಿ ನೀಡಲಾಗಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಖಾಯಂ ದೂರದರ್ಶನ ಕೇಂದ್ರದ ನಿರ್ಮಾಣ ಕಾರ್ಯವನ್ನು ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಸಾರ ಖಾತೆಯ ನಿರ್ಮಾಣ ಕಾರ್ಯ ವಿಭಾಗವು ಕೈಗೊಳ್ಳುವುದೆಂದು ಕೇಂದ್ರ ಸರಕಾರ ತಿಳಿಸಿದೆ. ಈ ಕೆಲಸವನ್ನು ಆದ್ಯತೆಯ ಮೇಲೆ ಪೂರೈಸಲು ಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ಸಹ ಕೇಂದ್ರ ಸರಕಾರ ತಿಳಿಸಿದೆ. ಈ ಬಗ್ಗೆ ಕೇಂದ್ರ ಸರಕಾರದೊಂದಿಗೆ ವ್ಯವಹಾರ ಮುಂದುವರಿದಿದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಉಪಾಧ್ಯಕ್ಷರೆ. ಈ ಸೂಚನೆಯಲ್ಲಿ ನಾನು ಸ್ಪಷ್ಟವಾಗಿ ವಿವರಣೆ ಕೇಳಿದ್ದೇನೆ. ಕರ್ನಾಟಕ ರಾಜ್ಯದ ಪ್ರಖ್ಯಾತ ಸಾಹಿತಿಗಳು ಮತ್ತು ಕಲಾವಿದರು ಮಾರ್ಚಿ ಒಂದನೇ ತಾರೀಖಿನಿಂದ ಆಕಾಶವಾಣಿಯ ಕಾರ್ಯಕ್ರಮಗಳನ್ನು ಬಹಿಷ್ಕರಿಸಿದ್ದಾರೆ ಮತ್ತು ಅವರ ಯಾವುದೇ ಕೃತಿಗಳನ್ನಾಗಲಿ, ಕವನವನ್ನಾಗಲಿ ಪ್ರಚಾರ ಅಥವಾ ಪ್ರಕಟಿಸಬಾರದು ಎಂದು ಮಾಡಿದ್ದಾರೆ ಹಾಗೂ ಬರುವ ಏಪ್ರಿಲ್ ಮೊದಲನೇ ವಾರದಲ್ಲಿ ಉಗ್ರವಾದಂಥ ಚಳುವಳಿಯನ್ನು ಮಾಡುತ್ತೇವೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನೂ ಸಹ ಕೊಟ್ಟಿದ್ದಾರೆ. ಮುಖ್ಯವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದು ಏತಕ್ಕಂದರೆ, ಬೆಂಗಳೂರು ಮಂತ್ರಿ ಅದರ ಸುತ್ತ ವಲಯದಲ್ಲಿ ಸುಮಾರು ೬೦ ಸಾವಿರ ಟೆಲಿವಿಷನ್ ಸೆಟ್ಸ್ ಇವೆ. ಪ್ರತಿದಿವಸ ೧೦-೧೨ ಲಕ್ಷ ಜನ ನೋಟಕರು ಇದ್ದಾರೆ. ಪ್ರತಿದಿವಸ ದೂರದರ್ಶನದಲ್ಲಿ ತಮಿಳು, ಹಿಂದಿ ಮತ್ತು ಮರಾಠಿ ಕಾರ್ಯಕ್ರಮಗಳನ್ನು ನಮ್ಮ ನೋಟಕರಿಗೆ ಕೊಡುತ್ತಾ ಇದ್ದಾರೆ. ಇದನ್ನು ಪ್ರತಿಭಟಿಸಿ ಕಲಾವಿದರು ಮತ್ತು ಸಾಹಿತಿಗಳು ಪತ್ರ ಬರೆದಿದ್ದಾರೆ. ಅವರು ಯಾರು ಅಂದರೆ, ಕುವೆಂಪು, ಶ್ರೀರಂಗ, ಪು. ತಿ ನರಸಿಂಹಾಚಾರ್ಯರು, ಡಾ. ವಿ. ಕೃ. ಗೋಕಾಕ್, ಸುಮಂತ್ ನಾಡಿಗ್, ಗೋಪಾಲಕೃಷ್ಣ ಅಡಿಗ, ಮು. ನ. ಮೂರ್ತಿ. ಶಿವರುದ್ರಪ್ಪ, ಲಂಕೇಶ್, ರಾಮಚಂದ್ರ, ಆಲನಹಳ್ಳಿ, ಗೋಪಾಲಕೃಷ್ಣ ಬಿ. ವಿ. ವೈಕುಂಠರಾಜು, ಸಿದ್ದಲಿಂಗಯ್ಯ ಮುಂತಾದ ಎಲ್ಲಾ ಪ್ರಖ್ಯಾತ ಸಾಹಿತಿಗಳು ಅವರ ಕೃತಿಗಳನ್ನು ಆಕಾಶವಾಣಿ ಮೂಲಕ ಪ್ರಸಾರ ಮಾಡಬಾರದು ಮತ್ತು ಆ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದು ಎಂದು ಬಹಿಷ್ಕರಿಸಿದ್ದಾರೆ ಹಾಗೂ ಜನವರಿ ಒಂದನೇ ತಾರೀಖಿನ ಪ್ರಧಾನ ಮಂತ್ರಿಯವರಿಗೆ ಮತ್ತು ಪ್ರಸಾರ ಮಂತ್ರಿಯವರಿಗೆ ಶೋಕಾಸ್ ನೋಟೀಸ್ ತರಹ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಲ್ಲಿ ೪ ಹೊರಾಂಗಣ ಪ್ರಸಾರ ವಾಹನಗಳಿವೆ, ಅದನ್ನು ಏಷ್ಯಾಡ್ ಪ್ರಚಾರ ಕಾಲದಲ್ಲಿ ತೆಗೆದುಕೊಂಡಿದ್ದಾರೆ. ಆ ೪ ಓ. ಬಿ. ವ್ಯಾನ್‌ಗಳ ಪೈಕಿ ಒಂದು ಓ. ಬಿ. ವ್ಯಾನನ್ನು ಇಲ್ಲಿ ತರಿಸುವುದಕ್ಕೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದಿದ್ದಾರಾ ?

ಬೆಂಗಳೂರು ನಗರದ ಸುತ್ತಮುತ್ತಲ ಪ್ರದೇಶದಲ್ಲಿ ರಾತ್ರಿ ವೇಳೆಯಲ್ಲಿ ೨-೩ ಗಂಟೆಗಳ ಕಾಲ ವ್ಯಯವಾಗುತ್ತಿದೆ. ದೂರದರ್ಶನ ಪ್ರಸಾರ ಕಾರ್ಯಕ್ರಮಗಳು ಬರುತ್ತವೆ. ಮನೆಗಳಲ್ಲಿರುವ ರೇಡಿಯೋಗಳು ಮೂಲೆಗೆ ಬಿದ್ದಿವೆ. ಎರಡೂವರೆ, ಮೂರು ಗಂಟೆ ಕಾಲ ನಾಗರೀಕರು ಊಟವನ್ನೂ ಸಹ ಟೆಲಿವಿಷನ್ ಮುಂದೆ ಮಾಡುತ್ತಾ ಇದ್ದಾರೆ. ಎರಡೂವರೆ ಗಂಟೆ ಕಾಲ ಸುಮ್ಮನೆ ವ್ಯಯವಾಗುತ್ತಿದೆ. ಕನ್ನಡದ ಪ್ರಖ್ಯಾತ ಸಾಹಿತಿಗಳಾದ ಕುವೆಂಪು, ಮಾಸ್ತಿಯವರ ಮುಖವನ್ನೇ ನಾವು ಟೆಲಿವಿಷನ್‌ನಲ್ಲಿ ಕಾಣುತ್ತಾ ಇಲ್ಲ, ಅವರ ಕೃತಿಗಳನ್ನು ಕೇಳುತ್ತಾ ಇಲ್ಲ. ಕನ್ನಡದ ಯಾವುದೇ ಕಾರ್ಯಕ್ರಮ ಪ್ರಸಾರ ಮಾಡುವುದು ಅಂದರೆ, ಕನ್ನಡದ ಹಳೇ ಸಿನಿಮಾ, ನೃತ್ಯಗಳನ್ನು ಪ್ರಸಾರ ಮಾಡುತ್ತಾ ಇದ್ದಾರೆ, ಇದರ ಬಗ್ಗೆ ನಾವು ತೀವ್ರತರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದಕ್ಕೋಸ್ಕರವಾಗಿ ಸಾಹಿತಿಗಳು ಮತ್ತು ಕಲಾವಿದರು ಬರುವ ತಿಂಗಳ ಮೊದಲನೇ ವಾರದಲ್ಲಿ ರಸ್ತೆಗಿಳಿಯುತ್ತಾರೆ. ನಮ್ಮ ಸರ್ಕಾರದವರು ರೈತರ ಪ್ರತಿನಿಧಿಗಳನ್ನು ಕರೆದು ಮಾತನಾಡಿದ್ದಾರೆ, ಕಾರ್ಮಿಕರ ಪ್ರತಿನಿಧಿಗಳನ್ನು ಕರೆದು ಮಾತನಾಡಿದ್ದಾರೆ. ಆದೇ ರೀತಿ ಪ್ರಖ್ಯಾತ ಸಾಹಿತಿಗಳನ್ನು ಮತ್ತು ಕಲಾವಿದರನ್ನು ಕರೆದು ಈ ವಿಚಾರದಲ್ಲಿ ದೀರ್ಘವಾಗಿ ಚರ್ಚೆ ಮಾಡಿ ಕೇಂದ್ರ ಸರ್ಕಾರಕ್ಕೆ ಪ್ರತಿಭಟನೆ ಸೂಚಿಸಬೇಕು. ಒಂದೂವರೆ ವರ್ಷದಿಂದ ಟೆಲಿವಿಷನ್ ಮೂಲಕ ಹಿಂದಿ, ತಮಿಳು ಮತ್ತು ಮರಾಠಿ ಕಾರ್ಯಕ್ರಮಗಳನ್ನು ನೋಟಕರ ಮೇಲೆ ಹೇರುವಂಥಾದ್ದು ನಡೆಯುತ್ತಾ

ಇದೆ. ದೂರದರ್ಶನ ಕೇಂದ್ರವನ್ನು ಇಲ್ಲಿ ಸ್ಥಾಪನೆ ಮಾಡಬೇಕು, ಅಲ್ಲಿಯವರೆಗೆ ದೂರದರ್ಶನವನ್ನು ಬಹಿಷ್ಕರಿಸುವ ಸಂದರ್ಭ ಬರುತ್ತಾ ಇದೆ ಆದ್ದರಿಂದ ಸಾಹಿತಿಗಳು ಮತ್ತು ಕಲಾವಿದರು ಬರುವ ತಿಂಗಳ ಮೊದಲನೇ ವಾರದಲ್ಲಿ ದೊಡ್ಡ ಪ್ರದರ್ಶನವನ್ನು ನಡೆಸುತ್ತಾ ಇದ್ದಾರೆ. ನಮ್ಮ ದೂರದರ್ಶನದ ಜೊತೆಗೆ ಆಕಾಶವಾಣಿಯ ಸ್ಥಿತಿ ಏನಾಗಿದೆಯೆಂದರೆ, ಅವರ ಬೇಡಿಕೆಯನ್ನೂ ಮುಂದಿಟ್ಟಿದ್ದಾರೆ. ಏನೆಂದರೆ, ಆಕಾಶವಾಣಿಯಲ್ಲಿ ಏನಾ ಪ್ರಸಾರ ಮಾಡುತ್ತ ಇದ್ದಾರೆ ಅದು ನಮ್ಮ ರಾಜ್ಯದ ಹೊರಗಡೆ ಕೇಳಿಸುತ್ತಾ ಇಲ್ಲ. ಅದಕ್ಕೋಸ್ಕರ ಪರ್ಮನೆಂಟಾಗಿ ಶಾರ್ಟ್‌ವೇವ್ ವ್ಯವಸ್ಥೆಯನ್ನು ಮಾಡಬೇಕು, ಇದನ್ನು ಆಕಾಶವಾಣಿ ಕೇಂದ್ರಕ್ಕೆ ಆಳವಡಿಸಬೇಕು ಮತ್ತು ಇಲ್ಲಿ ಪರ್ಮನೆಂಟಾಗಿ ದೂರದರ್ಶನ ಕೇಂದ್ರವನ್ನು ಸ್ಥಾಪನೆ ಮಾಡಬೇಕು. ಅಲ್ಲಿಯವರೆಗೆ ಈ ಕಾರ್ಯಕ್ರಮಗಳನ್ನು ಪ್ರತಿಭಟನೆ ಮಾಡುವಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉದ್ಭವವಾಗುತ್ತಿದೆ. ಕರ್ನಾಟಕ ರಾಜ್ಯದ ಪ್ರಖ್ಯಾತ ಸಾಹಿತಿಗಳು ಮತ್ತು ಕಲಾವಿದರು ಈ ಕಾರ್ಯಕ್ರಮಗಳನ್ನು ಬಹಿಷ್ಕರಿಸಿದ್ದಾರೆ ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್ —ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ನೋಡಿದಾಗ ಕೇಂದ್ರಸರ್ಕಾರ ವಚನಭಂಗ ಮಾಡಿದೆ ಎಂದು ಹೇಳಬೇಕಾಗಿದೆ. ಒಂದು ರೀತಿಯಲ್ಲಿ ರಾಜ್ಯಸರ್ಕಾರದ ಜೊತೆಯಲ್ಲಿ ಅಸಹಕಾರ ಮಾಡುತ್ತಿದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ನವೆಂಬರ್ ೧, ೧೯೮೧ರಲ್ಲಿ ಬೆಂಗಳೂರಿನಲ್ಲಿ ಟಿ.ವಿ. ರಿಲೇ ಸ್ಟೇಷನ್‌ನನ್ನು ಅಂದಿನ ಕೇಂದ್ರಸರ್ಕಾರದ ಮಂತ್ರಿಗಳಾದ ಶ್ರೀಮಾನ್ ವಸಂತ ಸಾಠೆಯವರು ಪ್ರಾರಂಭ ಮಾಡಿದರು ; ಪ್ರಾರಂಭ ಮಾಡುತ್ತಾ ಶ್ರೀಮಾನ್ ಸಾಠೆಯವರು ಒಂದು ಮಾತು ಹೇಳಿದರು. ಏನಂದರೆ,

> "The Centre has entrusted the construction of the studio to the Karnataka PWD and it was for them to complete it expeditiously."

ಎಂದು ಹೇಳಿದ್ದಾರೆ. ಪಿ.ಡಬ್ಲ್ಯು.ಡಿ. ಈ ಬಗ್ಗೆ ಏನು ಮಾಡಿದೆ ಎಂದು ಕೇಳುತ್ತಾ ಇದ್ದೇನೆ. ಅವರು ಮುಂದುವರಿದು ಇನ್ನೊಂದು ಮಾತು ಹೇಳಿದರು, ಏನೆಂದರೆ :

> "Bangalore was going to have one of the best T. V. towers with the revolving restaurant top like the one in Canberra T. V. Towers."

ಕ್ಯಾನ್‌ಬರಾ ರೀತಿಯಲ್ಲಿ ಟಿ.ವಿ. ಟವರನ್ನು ಮಾಡಬೇಕು ಎಂದು ಹೇಳಿದರು. ಕೊನೆಯಲ್ಲಿ ಬಹಳ ಮುಖ್ಯವಾದ ಮಾತನ್ನು ಹೇಳಿದ್ದಾರೆ. ಏನೆಂದರೆ ;

> "The people of Karnataka standing by Mrs. Indira Ghandi through thick and thin was the main key factor for Bangalore getting the relay station so soon,"

ಎನ್ನತಕ್ಕ ಮಾತನ್ನು ಹೇಳಿದ್ದಾರೆ ಇದು ೧೯೮೧ರಲ್ಲಿ ಮಾನ್ಯ ವಸಂತ ಸಾಠೆಯವರು ಆಡಿರತಕ್ಕ ಮಾತು. ಇವತ್ತು ೧೯೮೩, ೧೯೮೩ರ ವರೆಗೆ ಒಂದು ಟಿ.ವಿ. ಟವರ್ ಬಂದಿಲ್ಲ, ಟಿ.ವಿ. ಸ್ಟುಡಿಯೋ ಬಂದಿಲ್ಲ. ಇದಕ್ಕೆ ಏನಾದರೂ ಕಾರಣ ಇದೆಯೇ ? ಆಗ ಕರ್ನಾಟಕ ರಾಜ್ಯದಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ ಸರ್ಕಾರ ಇತ್ತು, ಆಗ ಕೊಟ್ಟಿರತಕ್ಕ ಮಾತು ಇದು. ಈಗ ಕಾಂಗ್ರೆಸ್-ಐ ಸರ್ಕಾರ ಇಲ್ಲ ಎಂದು ನಿಧಾನ ಮಾಡಿದ್ದಾರಾ ಅಥವಾ ಇದನ್ನು ಕ್ಯಾನ್ಸಲ್ ಮಾಡಿದ್ದಾರಾ ಎನ್ನುವುದನ್ನು ಸ್ವಲ್ಪ ಹೇಳಬೇಕು. ಅಂದಿನ ಮುಖ್ಯ ಮಂತ್ರಿಯವರು ಒಂದು ಮಾತು ಹೇಳಿದರು. ಏನೆಂದರೆ

> "CM who presided over, promised the complete to construction of TV tower ahead of schedule"

ಅಂದರೆ ಏನು ಒಂದು ಟಿ.ವಿ. ಸ್ಟೇಷನ್ ಕನ್‌ಸ್ಟ್ರಕ್ಷನ್ ಮಾಡಬೇಕಾಗಿದೆ, ಅದನ್ನು ಪಿ.ಡಬ್ಲ್ಯು.ಡಿ.ಗೆ ಎಂಟರೆಸ್ಟ್ ಮಾಡಿದ್ದೇವೆ, ಅವರು ಬಹಳ ಬೇಗ ಕಂಪ್ಲೀಟ್ ಮಾಡುತ್ತಾರೆ ಎಂದು ಹೇಳಿದರು. ಈಗ ಟಿ.ವಿ. ಸ್ಟುಡಿಯೋವನ್ನು ಪಿ.ಡಬ್ಲ್ಯು.ಡಿ. ಯವರು ಕನ್‌ಸ್ಟ್ರಕ್ಷನ್ ಮಾಡುತ್ತಿದ್ದಾರೆಯೇ ? ಈಗ

ಮಂತ್ರಿಗಳ ಹೇಳಿಕೆಯಲ್ಲಿ ಜವಿೂನು ಮಾತ್ರ ಕೊಟ್ಟಿರುವುದು ಎಂದು ಹೇಳಿದ್ದಾರೆ. ಆಗ ಚೀಪ್ ಮಿನಿಸ್ಟರ್ ಇನ್ನೊಂದು ಮಾತನ್ನು ಹೇಳಿದ್ದಾರೆ. ಏನೆಂದರೆ, He spoke of the plan to extend the programme to Mysore, Mercara. Mangalore Karwar and Belgaum. ಎಂದು, ಗಿನಾಂಕ ೫-೮-೧೯೮೨ರಲ್ಲಿ ಚೀಫ್ ಮಿನಿಸ್ಟರ್ ಮೈಸೂರಿನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ. ನವೆಂಬರ್ ೧, ೧೯೮೨ಕ್ಕೆ ನಿಮಗೆ ಒಂದು ಟಿ.ವಿ. ರಿಲೇ ಸ್ಟೇಷನ್ ಕೊಡುತ್ತೇವೆ ಎಂದು. ಆಗ ಫೈನಾನ್ಸ್ ಮಿನಿಸ್ಟರ್ ಆಗಿದ್ದ ಮಾನ್ಯ ವೀರಪ್ಪ ಮೊಯ್ಲಿಯವರು ಅವರ ಜೊತೆಯಲ್ಲಿದ್ದರು ಇವರು ಸ್ಪಾಟ್‌ನಲ್ಲೇ ೧೦ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದೇನೆ ಎಂದು ಹೇಳಿದರು. Sri Moily sanctioned Rs. 10 lakhs on the spot. ಇಂತಹ ನಾಟಕಗಳನ್ನು ಏಕೆ ಆಡುತ್ತಿದ್ದಾರೋ ಗೊತ್ತಾಗಲಿಲ್ಲ. ಇದು ಒಹಳ ತ್ರೀವ್ರವಾಗಿರತಕ್ಕ ವಿಚಾರ ಕೇಂದ್ರಸರ್ಕಾರದವರು ಈ ರೀತಿ ಮಲತಾಯಿ ಧೋರಣೆ ತಾಳುವುದು ಸರಿಯಲ್ಲ. ೫ ಜನ ಮಂತ್ರಿಗಳು ಇದ್ದಾರೆ. ಶ್ರೀಮಾನ್ ವೀರೇಂದ್ರ ಪಾಟೀಲ್, ಶ್ರೀಮಾನ್ ಶಂಕರಾನಂದ, ಶ್ರೀಮಾನ್ ಎಸ್. ಎಂ. ಕೃಷ್ಣ, ಶ್ರೀಮಾನ್ ಜಾಫರ್ ಷರೀಫ್ ಮುಂತಾದ ಭಾರಿ ದೊಡ್ಡ ದೊಡ್ಡ ಮಂತ್ರಿಗಳು ಕರ್ನಾಟಕವನ್ನು ಪ್ರತಿನಿಧಿಸತಕ್ಕವರು ಇದ್ದರೂ ಆಗಲಿಲ್ಲ. ಆದ್ದರಿಂದ ನನಗನ್ನಿಸುತ್ತದೆ, ಈ ಮನೆಯ ಒಂದು ನಿಯೋಗ ಹೋಗುವುದು ಒಳ್ಳೆಯದು ಎಂದು. ಏಕೆಂದರೆ, ಸರ್ಕಾರದ ಕೈಯಲ್ಲಿ ಆಗಲಿಲ್ಲ, ಮಂತ್ರಿಗಳು ಹೋಗಿ ಬಂದರು, ಅವರ ಕೈಯಲ್ಲಿ ಆಗಲಿಲ್ಲ. ಆದ್ದರಿಂದ ಈ ಮನೆಯ ನಿಯೋಗ ಹೋಗುವುದು ಒಳ್ಳೆಯದು.

ಶ್ರೀ ಪಾಪಾಪತಿ.—ಜಾಗ್ರತೆಯಾಗಿ ಕಳುಹಿಸಿ ಕೊಡಿ, ಇದನ್ನೆಲ್ಲಾ ಮಾಡಿಕೊಂಡು ಬರೋಣ. ಬರೀ ಬಾಯಲ್ಲಿ ಹೇಳುವುದಕ್ಕಿಂತ ಕಳುಹಿಸಿ ಕೊಡಿ ಹೋಗಿ ಬಂದುಬಿಡಲಿ.

ಶ್ರೀ ಪಿ. ರಾಮದೇವ್.—ನಮ್ಮ ಸರ್ಕಾರದ ಪರವಾಗಿ ಮಾನ್ಯ ಶ್ರೀ ರಘುಪತಿಯವರು ಹೋಗಿದ್ದರು, ಅವರ ಕೈಯಿಂದಲೂ ಆಗಲಿಲ್ಲ, ಕೇಂದ್ರ ಸರ್ಕಾರದಲ್ಲಿ ೫ ಜನ ಕರ್ನಾಟಕವನ್ನು ಪ್ರತಿನಿಧಿಸತಕ್ಕ ಮಂತ್ರಿಗಳು ಇದ್ದಾರೆ ಅವರ ಕೈಯಿಂದಲೂ ಆಗಲಿಲ್ಲವೆಂದರೆ ಇನ್ನು ಯಾರ ಕೈಯಿಂದ ಇದು ಆಗುತ್ತದೆಂಬುದು ಅರ್ಥವಾಗಲಿಲ್ಲ. ಇದಕ್ಕೆ ಕಾರಣ ಹೇಳಬೇಕು ಎಂದರೆ, ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರದ ಮೇಲೆ ಏನಾದರೂ ಮಲತಾಯಿ ಧೋರಣೆಯನ್ನು ತಾಳಿದ್ದಾರೆಯೇ ಎಂದು ಅನುಮಾನ ಬರುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕ್ವಾರಿಫಿಕೇಷನ್ ಕೇಳಬೇಕೇ ಹೊರತು ಈ ರೀತಿ ಭಾಷಣ ಮಾಡಬಾರದು. ಏನಾದರೂ ಬೇಕಾದರೆ ಮಾನ್ಯ ಸದಸ್ಯರುಗಳು ಸಂಬಂಧಪಟ್ಟ ಮಂತ್ರಿಗಳವರ ಛೇಂಬರ್‌ನಲ್ಲಿ ಹೋಗಿ ಕೇಳಿಕೊಳ್ಳಲಿ.

ಶ್ರೀ ಪಿ. ರಾಮದೇವ್.—ಟಿ.ವಿ.ಯಲ್ಲಿ ಹಿಂದಿ ಪ್ರೋಗ್ರಾಂ ಬಂದಾಗ ತಮಿಳುನಾಡಿನವರು ಕೂಡಲೇ ಬಾಯ್ ಕಾಟ್ ಮಾಡಿ ಅದನ್ನು ನಿಲ್ಲಿಸಿದರು ಅದೇ ರೀತಿ ಇವತ್ತು ನಮ್ಮ ತೊಂದರೆಯನ್ನು ಸಹ ಕೇಂದ್ರ ಸರ್ಕಾರದವರು ಸರಿಪಡಿಸದೇ ಹೋದರೆ ಮುಂದೆ ನಾವು ಅವರ ಎಲ್ಲಾ ಕಾರ್ಯಕ್ರಮಗಳನ್ನು ಬಹಿಷ್ಕರಿಸತಕ್ಕ ಕಾಲ ಬರುತ್ತದೆ ದಯವಿಟ್ಟು ಅದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳಿಗೆ ಇದನ್ನು ಮಾಡುವುದಕ್ಕೆ ಶಕ್ತಿ ಇಲ್ಲದೇ ಹೋದರೆ ಬೇರೆ ಯಾವುದಾದರೂ ಸಮರ್ಥವಾದ ರೀತಿಯಲ್ಲಿ ಮಾಡುವುದಕ್ಕೆ ಜನತಾ ಶಕ್ತಿಯನ್ನು ಪಡೆಯುವುದಕ್ಕೆ ಯೋಚಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಈಗ ಖಾಯಂ ದೂರದರ್ಶನವಾಗುವ ತನಕ ಓ.ಬಿ. ವ್ಯಾನ್ ಬೇಕೆಂದು ಕೇಳುತ್ತಿದ್ದೀರಲ್ಲ ಅದರ ಕ್ರಯವೆಷ್ಟು ? ಮಾನ್ಯ ರಘುಪತಿಯವರು ಈಗ ಪ್ರಯತ್ನವೇನು ಮಾಡುತ್ತಿದ್ದಾರೆ. ಅವರಿಂತ ಮುಂಚೆ ಹಿಂದಿನ ಸರ್ಕಾರದವರು ಏನಾದರೂ ಪ್ರಯತ್ನ ಮಾಡಿದ್ದರೇ ? ಅವರು ಪ್ರಯತ್ನ ನಡೆಸಿದ್ದರೆ ಅದು ಕಾರ್ಯಗತವಾಗಲಿಲ್ಲವೇ ಎಂಬುದನ್ನು ಸಹ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮದೇವ್‌ರವರು ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಜೊತೆಗೆ ಇನ್ನೊಂದು ಸಲಹೆ ಕೊಡುವುದೇನೆಂದರೆ, ತಮಿಳುನಾಡಿನವರು ಯಾವ ರೀತಿಯಾಗಿ ಹಿಂದಿ ಪ್ರೋಗ್ರಾಂ ಬಂದಾಗ ಬಹಿಷ್ಕಾರ ಹಾಕಿದರೋ ಅದೇ ರೀತಿ ನಮ್ಮ ಸರ್ಕಾರದವರು ಬಹಿಷ್ಕಾರ ಮಾಡಬೇಕು, ಜೊತೆಗೆ ಈ ಸದನದಲ್ಲಿ ನಡೆಯುತಕ್ಕ ಕಾರ್ಯಕಲಾಪಗಳನ್ನು ವರದಿ ಮಾಡುವ ರೇಡಿಯೋ, ಟಿ.ವಿ. ನಲ್ಲಿ ಬರುವುದನ್ನು ಸಹ ತಾವು ತಮ್ಮ ಅಧಿಕಾರವನ್ನು ಉಪಯೋಗಿಸಿ ತಡೆಹಿಡಿಯಬೇಕು. ಈ ರೀತಿಯಾಗಿ ಕನ್ನಡ ನಾಡಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಂತ್ರಿಗಳವರು ಡೆಲ್ಲಿಗೆ ಹೋಗಿ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿದ ಮೇಲೆ ಪತ್ರಿಕೆಯಲ್ಲಿ ಒಂದು ಸಮಾಚಾರ ಬಂದಿತ್ತು ಅದು ಏನೆಂದರೆ ಬೆಂಗಳೂರಿಗೆ ಓ. ಬಿ. ವ್ಯಾನ್ ಕೊಡುತ್ತಾರೆಂದು ಬಂದಿತ್ತು. ಆನಂತರ ಕರ್ನಾಟಕಕ್ಕೆ ಕೊಟ್ಟಿದ್ದನ್ನು ಬೇರೆ ರಾಜ್ಯಕ್ಕೆ ಕೊಡಲಾಗಿದೆಯೆಂದು ಪತ್ರಿಕೆಯಲ್ಲಿ ಇನ್ನೊಂದು ವರದಿ ಬಂದಿದೆ. ಅದುದರಿಂದ ಟಿ.ವಿ. ರಿಲೇ ರಿಕಾರ್ಡಿಂಗ್ ಸೆಂಟರ್ ನಮ್ಮ ಬೆಂಗಳೂರಿಗೆ ಬರುವವರೆಗೆ ಓ.ಬಿ. ವ್ಯಾನ್ ಕೊಡುತ್ತೇವೆಂದು ಹೇಳಿ ಒಪ್ಪಿಕೊಂಡವರು ಆನಂತರ ಏತಕ್ಕೆ ಕೊಡಲಿಲ್ಲ ಎನ್ನುವುದರ ಬಗೆ ಮಾನ್ಯ ಮಂತ್ರಿಗಳವರು ಸ್ಪಷ್ಟೀಕರಣ ನೀಡಬೇಕು.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಸಭಾಪತಿಗಳೇ, ಶ್ರೀಮಾನ್ ಕೆ. ಜಿ. ಮಹೇಶ್ವರಪ್ಪನವರು, ಶ್ರೀ ರಾಮ್‌ದೇವ್‌ರವರು ಮತ್ತು ಡಾ॥ ರಾಮಭಟ್‌ರವರು ಮತ್ತು ಶ್ರೀ ತಿಮ್ಮೇಗೌಡರವರು ಮತ್ತು ಶ್ರೀ ಬೈರೇಗೌಡರವರು ಅವರೆಲ್ಲರೂ ಹೇಳಿದ್ದನ್ನು ಸಂಪೂರ್ಣವಾಗಿ ನಾನು ಅರ್ಥ ಮಾಡಿಕೊಂಡಿದ್ದೇನೆ. ಶ್ರೀ ಕೆ. ಜಿ. ಮಹೇಶ್ವರಪ್ಪನವರು ಮಾತನಾಡುತ್ತ ಎಲ್ಲಾ ಸಾಹಿತಿಗಳು ಈ ದೂರದರ್ಶನ ಕಾರ್ಯಕ್ರಮಗಳನ್ನು ಮತ್ತು ಆಕಾಶವಾಣಿಯ ಕಾರ್ಯಕ್ರಮಗಳನ್ನು ಬಹಿಷ್ಕಾರ ಮಾಡಿದ್ದಾರೆ. ಮೇ ೧ನೇ ತಾರೀಖಿನಿಂದ ತೀವ್ರವಾಗಿ ಪ್ರತಿಭಟನೆ ಮಾಡುವ ಅವಕಾಶವಿದೆ, ಅದುದರಿಂದ ತಾವು ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿದ್ದಾರೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಹೇಳಬಯಸುವುದೇನೆಂದರೆ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಈ ಸಂದರ್ಭದಲ್ಲಿ ಇದ್ದಿದ್ದರೆ ಒಳ್ಳೆಯದಿತ್ತ ಇವರು ಇಲ್ಲದಿದ್ದರೂ ಪರವಾಗಿಲ್ಲ ಹೇಳುತ್ತೇನೆ. ಕರ್ನಾಟಕ ರಾಜ್ಯಕ್ಕೆ ಸಂಪೂರ್ಣವಾಗಿ ಅನ್ಯಾಯ ನಡೆದಿದೆ ಮಾನ್ಯ ರಾಮದೇವ್‌ರವರು ಹೇಳಿದ ಹಾಗೆ ನಾವು ಕೇಂದ್ರದ ಮಂತ್ರಿಗಳ ಹತ್ತಿರ ಮಾತನಾಡಿದಾಗ, ನಮ್ಮ ಬೆಂಗಳೂರಿನಲ್ಲಿ ದೂರದರ್ಶನದ ಕಟ್ಟಡವನ್ನು ನಾವೇ ಕಟ್ಟಿಸಿಕೊಡುತ್ತೇವೆಂದು ಹೇಳಿದಾಗ ಅವರು ಇಲ್ಲ ನಮ್ಮದೇ ಪಿ.ಡಬ್ಲ್ಯೂ.ಡಿ. ಇದೆ ಅದರ ಮುಖಾಂತರ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆ, ಅದುದರಿಂದ ನಮಗೇ ಬಿಟ್ಟುಕೊಡಿ ಎಂದು ಕೇಳಿಕೊಂಡರು. ಅವರಾಗಿಯೇ ನಮಗೇ ಬಿಟ್ಟುಕೊಡಿ ಎಂದು ಹೇಳಿದ್ದರಿಂದ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ದೂರದರ್ಶನದ ನಿರ್ದೇಶಕರು ಇಲ್ಲಿಗೆ ಬಂದಿದ್ದರು. ಅವರು ಇಲ್ಲಿಗೆ ಬಂದಾಗ ನಮ್ಮ ಮುಖ್ಯ ಮಂತ್ರಿಗಳನ್ನು ಬೆಟ್ಟಿಯಾಗಿದ್ದರು. ನಾನು ಆಗ ಇನ್ನೂ ಮಂತ್ರಿಯಾಗಿರಲಿಲ್ಲ. ಆಗ ಅವರು ನಮ್ಮ ಮುಖ್ಯಮಂತ್ರಿಗಳವರನ್ನು ಕುರಿತು ನಮಗೆ ಜಾಗದ ಬಗ್ಗೆ ಇನ್ನೂ ಪೊಜಿಷನ್ ಸರ್ಟಿಫಿಕೇಟ್ ಸಿಕ್ಕಿಲ್ಲ ಎಂದು ಹೇಳಿದಾಗ, ಕೂಡಲೇ ನಮ್ಮ ಮುಖ್ಯಮಂತ್ರಿಗಳವರು ಪೊಜಿಷನ್ ಸರ್ಟಿಫಿಕೇಟ್‌ನ್ನು ಅವರ ಕೈಗೆ ತಲುಪಿಸುವ ಹಾಗೆ ವ್ಯವಸ್ಥೆ ಮಾಡಿದ್ದಾರೆ. ಅವರ ಕೈಯಲ್ಲಿಯೇ ಪಿ ಡಬ್ಲ್ಯೂ ಡಿ ವಿಭಾಗವಿದೆ ಅದರೂ ಇನ್ನೂ ಕೇಂದ್ರದವರು ಕೆಲಸ ಪ್ರಾರಂಭ ಮಾಡಿಲ್ಲ. ಆಗ ಏತಕ್ಕೆ ಪ್ರಾರಂಭ ಮಾಡಿಲ್ಲ ಎನ್ನುವ ಬಗ್ಗೆ ನಮಗೆ ಮಾಹಿತಿ ತಿಳಿದುಬಂದಿಲ್ಲ. ನಮ್ಮಗಾದರೂ ಕಟ್ಟಿಡ ವಿಭಾಗವನ್ನು ಕಟ್ಟಸುವುದಕ್ಕೆ ಬಿಟ್ಟುಕೊಟ್ಟರೆ ನಾವು ರಿಕಾರ್ಡ್ ಟೈಮ್‌ನಲ್ಲಿಯೇ ಕಟ್ಟಿ ಕೊಡುವುದಕ್ಕೆ ಸಿದ್ಧರಿದ್ದೇವೆ ಅದಕ್ಕೂ ಅವರು ತಯಾರಾಗಿಲ್ಲ. ಹೀಗಾಗಿ ಈಗಿನ ಪರಿಸ್ಥಿತಿ ನೋಡಿದರೆ ೧೯೮೫ನೇ ಇಸ್ವಿಯಾದರೂ ದೂರದರ್ಶನ ಕೇಂದ್ರ ನಮ್ಮ ರಾಜ್ಯಕ್ಕೆ ಬರುತ್ತದೆ ಎನ್ನುವ ಬಗ್ಗೆ ನಂಬಿಕೆ ನನಗಂತೂ ಇಲ್ಲ. ದೂರದರ್ಶನದ ಕಟ್ಟಡವೇ ಇನ್ನೂ ಪ್ರಾರಂಭವಾಗದೇ ಇರುವಾಗ ಇನ್ನು ವಿವಾಲ್ಡಿಂಗ್ ರೆಸ್ಪೋರೆಂಟ್ ಎಲ್ಲಿಂದ ಬಂತು ? ಇದೆಲ್ಲಾ ಹಗಲು ಕನಸಾಗುತ್ತದೆ. ಹಿಂದಿನ ಸರ್ಕಾರದವರು ಇದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ ಅದರ ಬಗ್ಗೆ ಏನೂ ಮಾಹಿತಿ ಇಲ್ಲ. ಅದಲ್ಲಾ ಬರೀ ಪತ್ರಿಕಾ ಹೇಳಿಕೆಯಾಗಿ ಮಾತ್ರ ಉಳಿದಿದೆ. ನಾಳೆ ಈ

ಗಂಟೆಗೆ ಸಭೆ ಕರೆದಿದ್ದೇವೆ, ಅಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡುತ್ತೇವೆ. ಮಾನ್ಯ ರಾಮದೇವ್‌ರವರು ಮಂತ್ರಿಗಳಿಗೆ ಶಕ್ತಿ ಇದೆಯೋ ಇಲ್ಲವೋ ಶಕ್ತಿ ಇಲ್ಲದಿದ್ದರೆ ಈ ಸದನದ ನಿರ್ಣಯವನ್ನು ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತನಾಡಲು ಕಳುಹಿಸಿ ಕೊಡಲಿ ಎಂದು ಹೇಳಿದರು. ಇಲ್ಲಿ ಶಕ್ತಿ ಪ್ರದರ್ಶನದ ಪ್ರಶ್ನೆಯೇ ಇಲ್ಲ. ಇಲ್ಲಿ ನ್ಯಾಯವಾದ ಬೇಡಿಕೆ ಇದೆ ಅದನ್ನು ಕೇಳುತ್ತಿದ್ದೇವೆ, ಭಿಕ್ಷೆ ಬೇಡುವುದಿಲ್ಲ, ಯಾವುದನ್ನೂ ಭಿಕ್ಷೆ ಬೇಡುತ್ತಿಲ್ಲ. ಬೇರೆ ರಾಜ್ಯಗಳಲ್ಲಿ ಇರುವಾಗ ಕರ್ನಾಟಕ ರಾಜ್ಯಕ್ಕೆ ಮಾತ್ರ ಏತಕ್ಕೆ ಕೊಡಲಿಲ್ಲ ಇದು ಯಾವ ನ್ಯಾಯ ? ಕನ್ನಡಿಗರು ಏನು ತಪ್ಪು ಮಾಡಿದ್ದಾರೆ ? ಇದರಿಂದಾಗಿ ನಮ್ಮ ಕಲಾವಿದರಿಗೆ ಟಿ. ವಿ ಯಲ್ಲಿ ಭಾಗವಹಿಸುವುದಕ್ಕೆ ಅವಕಾಶವೇ ಇಲ್ಲದ ಹಾಗಾಗಿದೆ. ನಮ್ಮ ಕನ್ನಡ ಕಾರ್ಯಕ್ರಮಗಳನ್ನು ನಾವು ಪ್ರಸಾರ ಮಾಡುವುದಕ್ಕೆ ಅದಕಾಶವಿಲ್ಲದ, ನಮ್ಮ ಯಾವುದೇ ಕಾರ್ಯಕ್ರಮಗಳನ್ನು ನಿರೂಪಣೆ ಮಾಡುವುದಕ್ಕೆ ಅವಕಾಶವಿಲ್ಲದ ಹಾಗಾಗಿದೆ. ಇದಕ್ಕೆ ತಮಗೆ ಹೇಳುತ್ತೇನೆ, ನಾವು ಇದಕ್ಕಾಗಿ ತಮಿಳುನಾಡು ಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿದೆ. ಅಲ್ಲಿಯ ಮುಖ್ಯಮಂತ್ರಿಗಳಾದ ಶ್ರೀ ಎಂ. ಜಿ. ರಾಮಚಂದ್ರನ್‌ರವರು ಇಲ್ಲಿಗೆ ಬಂದಾಗ ನಾನು ಪ್ರಸ್ತಾಪ ಮಾಡಿದ್ದೇನೆ, ಅವರೂ ಕೂಡ ಇದರ ಬಗ್ಗೆ ಕನ್ನಡದ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗ ಬೇಕು ಅದಕ್ಕಾಗಿ ಅವರೂ ಪ್ರಯತ್ನ ಪಡುವುದಾಗಿ ಹೇಳಿದ್ದಾರೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ನಾವು ಕನ್ನಡ ಕಾರ್ಯಕ್ರಮಗಳನ್ನು ರಿಲೇ ಮಾಡುವ ಬಗ್ಗೆ ಪತ್ರ ಬರೆದಿದ್ದೇವೆ. ಆದಕ್ಕೆ ಅವರು ಏನು ಉತ್ತರ ಬರೆದಿದ್ದಾರೆ ಎಂದರೆ, ಆದ್ಯತೆಯ ಮೇರೆಗೆ ಪ್ರದರ್ಶನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಹೇಳಿರುವ ಪ್ರಕಾರವಾಗಿ ೧ನೇ ಜೂನ್ ೧೯೮೨ ರಿಂದ ೧೧ನೇ ಡಿಸೆಂಬರ್ ೧೯೮೨ರವರೆಗೆ ಅಂದರೆ ೬ ತಿಂಗಳಲ್ಲಿ ಕೇವಲ ೬೭ ಗಂಟೆಗಳ ಕಾಲ ಮಾತ್ರ ನಮ್ಮ ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಿದ್ದಾರೆ.

ಶ್ರೀ ಪಿ. ರಾಮದೇವ್.—೬ ಗಂಟೆ ಮಾತ್ರ ಏತಕ್ಕೆ, ಅದೂ ಬೇಡವೇ ಬೇಡ.

ಶ್ರೀ ಎಂ. ರಘುಪತಿ.—ಮರಾಠಿ, ತಮಿಳು ಕೇಳುವ ಬಗ್ಗೆ ನಮ್ಮ ಕನ್ನಡಿಗರಿಗೆ ಯಾವ ವಿಧದಲ್ಲಿಯೂ ಆಡಚಣೆ ಏನೂ ಇಲ್ಲ. ಆದರೆ ನಾನು ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸುವ ಬಗ್ಗೆ ಖುದ್ದಾಗಿ ಭೇಟಿ ಮಾಡಿ ಹೇಳಿದಾಗ ದೂರದರ್ಶನ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ೨ ವರ್ಷಗಳ ಕಾಲ ಬೇಕಾಗುತ್ತದೆ ಅಲ್ಲಿಯವರೆಗೆ ಓ ಬಿ. ವ್ಯಾನ್ ಕೊಡಿ ಎಂದು ಕೇಳಿದ್ದೆ. ಆದಕ್ಕೆ ಅವರು ಒದಗಿಸಿ ಕೊಡುತ್ತೇವೆಂದು ಹೇಳಿದ್ದರು. ಆನಂತರ ಇನ್ನೊಮ್ಮೆ ನಾನು ಭೇಟಿಯಾದಾಗ ಎರಡು ಕಡೆಗೆ ನಾವು ಕಮಿಟ್‌ಮೆಂಟ್ ಮಾಡಿಕೊಂಡಿದ್ದೇವೆ ಒಂದು ಬೊಂಬಾಯಿಗೆ ಮತ್ತೊಂದು ಡೆಲ್ಲಿಗೆ ಮಾತ್ರ ಎಂದು ಹೇಳಿದರು.

೧-೩೦ ಪಿ.ಎಂ.

ಈಗ ಇದುವರೆಗೆ ಅವರಿಂದ ಉತ್ತರವೇನೂ ಬಂದಿಲ್ಲ. ಮಂತ್ರಿಗಳೆಲ್ಲ ಪ್ರಭಾವ ಬೀರುತ್ತಾರೆಂದು ಶ್ರೀ ಎಸ್. ಎಂ. ಕೃಷ್ಣರವರು ಪತ್ರ ಬರೆದಿದ್ದಾರೆ.

ಒಬ್ಬರು ಮಾನ್ಯ ಸದಸ್ಯರು.—ಶ್ರೀಮಾನ್ ಮಲ್ಲಿಕಾರ್ಜುನ ಅವರು ಆಗುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಎರಡನೆಯದಾಗಿ, ಶ್ರೀ ಜಾಫರ್ ಷರೀಫ್ ಮತ್ತು ಶ್ರೀ ಜನಾರ್ಧನ ಪೂಜಾರಿಯವರು ಪತ್ರ ಬರೆದಿದ್ದಾರೆ, ಒತ್ತಡ ತರುತ್ತಾರೆ ಆದ್ದರಿಂದ, ನಾನು ಹೇಳುವುದೇನೆಂದರೆ, ದೂರದರ್ಶನ ಕೇಂದ್ರ ಇಲ್ಲದಿದ್ದರೂ ನಮಗೆ ಓ.ಬಿ. ವ್ಯಾನನ್ನು ಏತಕ್ಕೆ ಕೊಡಲಿಲ್ಲವೆಂಬ ವಿಚಾರ ಆಶ್ಚರ್ಯವಾಗಿ ಉಳಿದಿದೆ. ಓ.ಬಿ. ವ್ಯಾನ್ ಎರಡರಲ್ಲಿ ಒಂದನ್ನು ಅಮೃತಸರಕ್ಕೆ ಮತ್ತೊಂದನ್ನು ಕಲ್ಕತ್ತಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕೊಡಲಿ, ಬೇಡವೆಂದು ಹೇಳುವುದಿಲ್ಲ. ಕೊಟ್ಟಿದ್ದರೆ ಪರವಾಗಿಲ್ಲ. ಆದರೆ ಕೇಂದ್ರ ಸ್ಥಳದಲ್ಲಿ ಕೂಡ ಕೊಟ್ಟಿಲ್ಲ. ನಮಗೆ ನ್ಯಾಯವಾಗಿ ಓ.ಬಿ. ವ್ಯಾನನ್ನು ಏನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ವಿರೋಧ ಪಕ್ಷದಲ್ಲಿದ್ದ ಹಾಗೆ ಮಾತನಾಡುತ್ತಿದ್ದಾರೆ. ಇವರಿಂದ ಏನೂ ಸಿಗುತ್ತಿಲ್ಲ. ಇವರೂ ಕೂಡ ಕೇಂದ್ರಕ್ಕೆ ವಿರೋಧವಾಗಿ ಹೇಳುತ್ತಿದ್ದಾರೆ. ತಾವು ಇದರ ಬಗ್ಗೆ ಏನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ರಘುಪತಿ.—ನಿಮ್ಮ ಭಾವನೆ ಅರ್ಥವಾಯಿತು. ನಾನು ಹೇಳುವುದೇನೆಂದರೆ, ನೀವು ಪ್ರತಿಭಟನೆ ಮಾಡಿ ಎಂದು. ನಾವೆಲ್ಲ ಸೇರಿ ಪ್ರತಿಭಟನೆ ಮಾಡಿ ಕೇಂದ್ರದ ಮನ ಒಲಿಸೋಣ. ಅದು ನಮ್ಮ ನ್ಯಾಯವಾದ ಬೇಡಿಕೆ. ಅದು ನಮಗೆ ಸಲ್ಲಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಒಂದು ಸ್ಪೆಷಲ್ ರೆಸಲ್ಯೂಷನ್ ತರಬೇಕು. ಎಲ್ಲರೂ ಸೇರಿ ಅದನ್ನು ಪಾಸ್ ಮಾಡೋಣ. ಆ ರೀತಿ ಮಾಡಿ ಕೇಂದ್ರ ಸರ್ಕಾರಕ್ಕೆ ಹೇಳೋಣ.

ಶ್ರೀ ಎಂ. ರಘುಪತಿ.—ಅದು ಉತ್ತಮ ಸಲಹೆ.

ಶ್ರೀ ಎಂ. ಎಸ್. ಪಾಟೀಲ್.—ಅದರ ಸ್ಥಾಪನೆಯನ್ನು ಬೆಂಗಳೂರು ನಗರದಲ್ಲಿ ಮಾಡಬೇಕು

ಶ್ರೀ ಎಂ. ರಘುಪತಿ.—ಅವರು ಹೇಳುವುದರಲ್ಲಿ ಅರ್ಥ ಇದೆ. ಬೆಂಗಳೂರಿನಲ್ಲಿ ದೂರದರ್ಶನ ಕೇಂದ್ರವನ್ನು ಸ್ಥಾಪನೆ ಮಾಡಿದರೆ ರಿಲೇ ಸ್ಟೇಷನ್ ಅನ್ನು ಎಲ್ಲಿ ಬೇಕಾದರೂ ಮಾಡಬಹುದು.

ಶ್ರೀ ಪಂಪಾಪತಿ.—ಹಾಗೆ ಮಾಡಿದರೆ ಎರಡೂ ಕಡೆಗೆ ಅನುಕೂಲವಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು.—ಇದು ಕಾಂಗ್ರೆಸ್ ರಾಜಕೀಯ, ನೀವು ತಲೆಹಾಕಬೇಡಿ.

ಉಪಾಧ್ಯಕ್ಷರು.—ಇನ್ನೂ ಕೂಸು ಹುಟ್ಟಿಲ್ಲ. ಈಗಲೇ ಏತಕ್ಕೆ ಹೇಳುತ್ತಿದ್ದೀರಿ?

ಶ್ರೀ ಕೆ. ಶಿವಮೂರ್ತಿ.—ದಾವಣಗೆರೆಯಲ್ಲಿ ದೂರದರ್ಶನ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಪ್ರೊಪೋಸಲ್ ಇತ್ತು. ಆದ್ದರಿಂದ, ಅಲ್ಲಿ ಮಾಡಿದರೆ ಒಳ್ಳೆಯದು.

ಶ್ರೀ ಎಂ. ರಘುಪತಿ.—ಎರಡನೆಯ ತಾರೀಖು ನಾನು ಡೆಲ್ಲಿಗೆ ಹೋಗುತ್ತೇನೆ. ಅಲ್ಲಿ ಮತ್ತೆ ಕೇಂದ್ರದ ಸಚಿವರನ್ನು ಭೇಟಿಯಾಗುತ್ತೇನೆ. ಮತ್ತು ಕಡೆಯದಾಗಿ ಪ್ರಾರ್ಥಿಸಿ, ನೀವು ಕರ್ನಾಟಕಕ್ಕೆ ನ್ಯಾಯವಾಗಿ ಸಲ್ಲಬೇಕಾದ ಒ.ಬಿ. ವ್ಯಾನ್ ಅನ್ನು ಕಳುಹಿಸಿಕೊಡಿ ಎಂದು ಕೇಳುತ್ತೇನೆ. ಅದಕ್ಕೆ ಎರಡು ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಕಲರ್ ಆದರೆ ೨ ಕೋಟಿ ರೂಪಾಯಿ ಆಗುತ್ತದೆ, ಕಪ್ಪು-ಬಿಳುಪು ಆದರೆ ೫೦ ಲಕ್ಷ ರೂಪಾಯಿ ಆಗುತ್ತದೆ. ಅದನ್ನು ನಾವೇ ತಂದಿಟ್ಟುಕೊಳ್ಳಬಹುದು. ಆದರೆ, ಆಗ ಕೇಂದ್ರದ ವಿರುದ್ಧ ಇವರದ್ದೇ ಪ್ರಚಾರ ಮಾಡುವುದಕ್ಕೆ ಹೊರಟಿದ್ದಾರೆಂದು ಆಪಾದನೆ ಬರುತ್ತದೆ. ನಮಗೆ ಬರಬೇಕಾದ ಒ.ಬಿ ವ್ಯಾನ್ ಬೇಕಾದರೆ, ಪ್ರಭಾವೀ ವ್ಯಕ್ತಿಗಳಾದ ಶ್ರೀಕಂಠಯ್ಯ ನವರು ವೀರಪ್ಪ ಮೊಯಿಲಿಯವರು ಎಲ್ಲರೂ ಸೇರಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಹೇಳಬೇಕು. ಶ್ರೀಮತಿ ಇಂದಿರಾಗಾಂಧಿಯವರು, ನಾನು ಕರ್ನಾಟಕದ ಮಗಳು ಎಂದು ಹೇಳಿದ್ದಾರೆ. ಮಗಳಾಗಿ ಕರ್ನಾಟಕಕ್ಕೆ ಈ ಕೊಡುಗೆ ಕೊಡಲಿ ಎಂದು ಎಲ್ಲರೂ ಸೇರಿ ಹೇಳೋಣವೆಂದು ಹೇಳುತ್ತಾ, ಈ ಸದನದ ಅಭಿಪ್ರಾಯವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದೇನೆ. ಮೊದಲು ನಾನು ಕೇಂದ್ರಕ್ಕೆ ಹೋಗಿ ಬರುತ್ತೇನೆ. ಆದು ಆಗದಿದ್ದರೆ ನಂತರ ಎಲ್ಲರೂ ಒಪ್ಪಿದರೆ ರೆಸಲ್ಯೂಷನ್ ಮಾಡಿ ಕಳುಹಿಸೋಣ.

ಶ್ರೀ ಜೆ. ಡಿ ಸೋಮಪ್ಪ.—ಶ್ರೀಮತಿ ಇಂದಿರಾಗಾಂಧಿಯವರಿಗೆ ಹಾಸನ ಹಿಡಿಸಿದೆ, ಆದ್ದರಿಂದ ಅಲ್ಲಿ ಟಿ.ವಿ. ಕೇಂದ್ರವನ್ನು ಹಾಕಲಿ.

ಶ್ರೀ ಎಂ. ರಘುಪತಿ.—ಅದರಲ್ಲಿ ಏನೂ ಸಂಶಯವಿಲ್ಲ. ರಾಜಕೀಯದಲ್ಲಿ ಅದೆಲ್ಲ ಬಂದೇ ಬರುತ್ತದೆ. ಈ ಕಡೆಯವರು ಆ ಕಡೆ, ಆ ಕಡೆಯವರು ಈ ಕಡೆ ಆಗುತ್ತಾರೆ. ಆಗ ನಮ್ಮ ಕಡೆ ಕೊಡಿ ಎಂದು ಕೇಳುತ್ತಾರೆ. ಆದ್ದರಿಂದ, ಅದರ ಬಗ್ಗೆ ಎಲ್ಲ ಮಾಹಿತಿ ಕೊಡಾವುದು ಬೇಕಾಗಿಲ್ಲ. ಆ ವಿಷಯ ಗಳನ್ನು ರಾಜಕೀಯಕ್ಕೆ ತೆಗೆದುಕೊಂಡು ಹೋದರೆ ಬಹಳ ದೂರ ಹೋಗುತ್ತದೆ. ನನಗೆ ಗೊತ್ತಿರುವಷ್ಟು ನಿಮಗೆ ಯಾರಿಗೂ ಗೊತ್ತಿಲ್ಲ. ಅದನ್ನು ಶ್ರೀ ಶ್ರೀಕಂಠಯ್ಯನವರು ಒಪ್ಪುತ್ತಾರೆ. ಅವರಿಗೆ ಎಲ್ಲ ಗೊತ್ತು. ಈ ಸದನದ ಸಂಪೂರ್ಣ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮತ್ತು ಇದನ್ನು ಕೇಂದ್ರಕ್ಕೆ ತಿಳಿಸುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಸಾಹಿತಿಗಳ ಮತ್ತು ಕಲಾವಿದರ ಕರೆಗೆ ಓಗೊಟ್ಟು ರಾಷ್ಟ್ರಕವಿ ಕುವೆಂಪುರವರು ಹೇಳಿರುವ ಒಂದು ವಾಕ್ಯವನ್ನು ಹೇಳುತ್ತೇನೆ.

'ಜನರಿಗೆ ಅತ್ಯವಶ್ಯಕವಾಗಿ ಬೇಕಾಗುವ ಸಾಕ್ಷರತೆ, ಅನ್ನ, ನೀರು ಇವು ಸಿಗುವವರೆಗೆ ದೂರದರ್ಶನ, ವಿಶ್ವ ಸಮ್ಮೇಳನ, ವಿಷ್ಯಾಡ್ ಇವುಗಳೆಲ್ಲ ಬಹಿಷ್ಕಾರ ಅರ್ಹ'

ಇವುಗಳನ್ನೆಲ್ಲ ಬಹಿಷ್ಕರಿಸುವ ವಿಚಾರದಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ಇದರ ಬಗ್ಗೆ ಸರ್ಕಾರದ ನಿಲುವು ಏನು?